# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ

# PILIKULA REGIONAL SCIENCE CENTRE SOCIETY

ವಾಮಂಜೂರು ಅಂಚೆ, ಮೂಡುಶೆಡ್ಡೆ, ಮಂಗಳೂರು – 575 028 ದೂ : 0824-2263635 ಫ್ಯಾಕ್ಸ್ :2263562

Vamanjoor Post, Moodushedde, Mangaluru – 575 028 Phone: 0284 - 2263635 Fax: 2263562

Website: www.pilikularsc.com E-mail: prscmangalore@gmail.com

---

**Date : 8-01-2020**

## ಈ ವರ್ಷದ ಮೊದಲ ಚಂದ್ರಗ್ರಹಣ – ವಿಸೇಷತೆ ಏನು?

## ಪಿಲಿಕುಳದಲ್ಲಿ ಚಂದ್ರಗ್ರಹಣ ವೀಕ್ಷಣೆಗೆ ಸಿದ್ದತೆ

ನಾವು ಬರಿಗಣ್ಣಿನಿಂದ ನೋಡಿ ಆನಂದಿಸಬಹುದಾದ ಖಗೋಳೀಯ ವಿದ್ಯಮಾನ ಚಂದ್ರಗ್ರಹಣ. ಚಂದ್ರ ಗ್ರಹಣಗಳಲ್ಲಿ ಮೂರು ವಿಧಗಳಿವೆ. ಸಂಪೂರ್ಣ, ಭಾಗಶ: ಮತ್ತು ಅರೆನೆರಳಿನ ಚಂದ್ರಗ್ರಹಣ. ಸಾಮಾನ್ಯವಾಗಿ ಸಂಭವಿಸುವ ಚಂದ್ರ ಗ್ರಹಣದಲ್ಲಿ ಭೂಮಿಯ ದಟ್ಟನೆರಳು**(Umbra)** ಚಂದ್ರನ ಮೇಲೆ ಬಿದ್ದು ಪೂರ್ಣ ಅಥವಾ ಭಾಗಶ: ಚಂದ್ರಗ್ರಹಣ ನಮಗೆ ಗೋಚರವಾಗುತ್ತದೆ. ಆಗ ಚಂದ್ರನ ಬಿಂಬವು ತಾಮ್ರವರ್ಣ ಅಥವಾ ರಕ್ತವರ್ಣದಲ್ಲಿ ಕಂಗೊಳಿಸುತ್ತದೆ. ಆದರೆ ಇದೇ ಜನವರಿ **10,** ಶುಕ್ರವಾರ ರಾತ್ರಿ **10.**೩೭ ರಿಂದ ಜನವರಿ **11**ರ ಮುಂಜಾನೆ **2.42**ರವರೆಗೆ ಸಂಭವಿಸುವ ಚಂದ್ರಗ್ರಹಣವು ತಾಮ್ರವರ್ಣದಲ್ಲಿ ಕಂಡುಬರುವುದಿಲ್ಲ. ಈ ಗ್ರಹಣದ ಸಂದರ್ಭದಲ್ಲಿ, ಭೂಮಿಯ ದಟ್ಟನೆರಳು ಚಂದ್ರನ ಮೇಲೆ ಬೀಳದೆ ಅರೆನೆರಳು(ತೆಳುನೆರಳು**-penumbra)** ಚಂದ್ರನ ಮೇಲೆ ಬೀಳುವ ಕಾರಣ ಚಂದ್ರ ನಸುಗೆಂಪು ಅಥವಾ ತಾಮ್ರವರ್ಣಕ್ಕೆ ಬದಲಾಗಿ ಬೂದು ಬಣ್ಣದಲ್ಲಿ ಗೋಚರಿಸುತ್ತಾನೆ. ಹೀಗಾಗಿ ಈ ರೀತಿಯ ಅರೆನೆರಳಿನ ಚಂದ್ರಗ್ರಹಣಕ್ಕೆ 'ತೋಳ ಚಂದ್ರಗ್ರಹಣ' ಎಂಬ ಅಡ್ಡಹೆಸರು ಬಂದಿದೆ. ಆಸಕ್ತರು ಬರಿಗಣ್ಣಿನಿಂದ ಈ ಗ್ರಹಣವನ್ನು ನೋಡಬಹುದು. ಅಥವಾ ದುರ್ಬೀನು, ದೂರದರ್ಶಕದ ಮೂಲಕವೂ ಈ ವಿದ್ಯಮಾನವನ್ನು ನೋಡಲು ಸಾಧ್ಯ. ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದಲ್ಲಿ ಈ ವಿದ್ಯಮಾನವನ್ನು ವೀಕ್ಷಿಸಲು ಸಿದ್ದತೆ ಮಾಡಲಾಗಿದೆ. ಆಸಕ್ತರು ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಆಹ್ವಾನವಿದೆಯೆಂದು ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ನಿರ್ದೇಶಕರು ತಿಳಿಸಿದ್ದಾರೆ.

ಸಹಿ

ಡಾ. ಕೆ ವಿ ರಾವ್

ನಿರ್ದೇಶಕರು, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ